**State Hostel Portal**
**Student FAQ’s (Frequently Asked Questions)**

1. ರಾಜ್ಯ ವಿದ್ಯಾರ್ಥಿ ನಿಲಯ **ತಂತ್ರಾಂಶ** ಎಂದರೆ ಏನು?
**What is the State Hostel Portal (SHP)?**
**ರಾಜ್ಯ ವಿದ್ಯಾರ್ಥಿ ನಿಲಯ** ತಂತ್ರಾಂಶವು **(SHP) ಕರ್ನಾಟಕ ಸರ್ಕಾರದ ಒಂದು ಯೋಜನೆಯಾಗಿದ್ದು,** ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗಳ ಮೂಲಕ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯ ಪ್ರವೇಶವನ್ನು ಸುಗಮ ಮತ್ತು ಪಾರದರ್ಶಕವಾಗಿ ಮಾಡಿಕೊಡುತ್ತದೆ.

The State Hostel Portal (SHP) is an initiative by the Government of Karnataka that facilitates hostel admissions for students across various categories under different departments such as Tribal Welfare, Backward Classes Welfare, and Minority Welfare.

2. ರಾಜ್ಯ ವಿದ್ಯಾರ್ಥಿ ನಿಲಯ **ತಂತ್ರಾಂಶ ಮೂಲಕ ನಿಲಯ ಸೀಟಿಗಾಗಿ ಯಾರು ಅರ್ಜಿ ಹಾಕಬಹುದು?**
**Who is eligible to apply for a hostel seat in SHP?**
ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದ**(SHP)** ಅಡಿಯಲ್ಲಿ ಹಾಸ್ಟೆಲ್ ಸೀಟುಗಳ ಅರ್ಹತೆಯು ವಿದ್ಯಾರ್ಥಿಗಳ ವರ್ಗ ಹಾಗೂ ಶೈಕ್ಷಣಿಕ ಮಟ್ಟವನ್ನು ಅವಲಂಬಿಸಿರುತ್ತದೆ. ಈ ಯೋಜನೆಯಡಿ ಮೆಟ್ರಿಕ್ ಪೂರ್ವ (**5**ನೇ ತರಗತಿಯಿಂದ **10**ನೇ ತರಗತಿಯವರೆಗೆ) ಹಾಗೂ ಮೆಟ್ರಿಕ್ ನಂತರದ ಕೋರ್ಸ್ ಗಳು (**10**ನೇ ತರಗತಿಗಿಂತ ಮೇಲಿನ ಪದವಿ ಮತ್ತು ಸ್ನಾತಕೋತ್ತರ ಪದವಿ ಸೇರಿದಂತೆ) ವಿದ್ಯಾರ್ಥಿಗಳಿಗೆ ವಸತಿ ವ್ಯವಸ್ಥೆಯ ಅವಕಾಶ ಕಲ್ಪಿಸಲಾಗಿದೆ.
**ಅರ್ಹತಾ ಮಾನದಂಡಗಳು ಇಲಾಖೆ ಹಾಗೂ ವರ್ಗವಾರು ಬದಲಾಗುತ್ತವೆ:**
**i. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ**
- **CAT–1** ವರ್ಗದ ವಿದ್ಯಾರ್ಥಿಗಳಿಗೆ: ಕುಟುಂಬದ ವಾರ್ಷಿಕ ಆದಾಯ **₹2.50** ಲಕ್ಷಕ್ಕಿಂತ ಕಡಿಮೆ ಅಥವಾ ಸಮಾನವಾಗಿರಬೇಕು.
- **CAT–2A, 3A** ಮತ್ತು **3B** ವರ್ಗದ ವಿದ್ಯಾರ್ಥಿಗಳಿಗೆ: ಕುಟುಂಬದ ವಾರ್ಷಿಕ ಆದಾಯ **₹1.00** ಲಕ್ಷಕ್ಕಿಂತ ಕಡಿಮೆ ಅಥವಾ ಸಮಾನವಾಗಿರಬೇಕು.

**ii. ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ**
- ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ: ಕುಟುಂಬದ ವಾರ್ಷಿಕ ಆದಾಯ **₹2.50** ಲಕ್ಷಕ್ಕಿಂತ ಕಡಿಮೆ ಅಥವಾ ಸಮಾನವಾಗಿರಬೇಕು.

**iii. ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ**
- **CAT–1, 2B, 3A** ಮತ್ತು **3B** ವರ್ಗದ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ: ಕುಟುಂಬದ ವಾರ್ಷಿಕ ಆದಾಯ **₹2.50** ಲಕ್ಷಕ್ಕಿಂತ ಕಡಿಮೆ ಅಥವಾ ಸಮಾನವಾಗಿರಬೇಕು.

Eligibility for a hostel seat under the **State Hostel Portal (SHP)** in Karnataka depends on the student's category and academic level. It accommodates Prematric (5th to 10th class) and Postmatric (above 10th, including graduation and post-graduation) students.
**Eligibility varies based on the department and category:**
i. **Backward Classes Welfare Department:** Students from categories CAT -1, 2A, 3A, and 3B with specific income limits i.e. for (CAT -1 family annual income should be

less than or equal to 2.5 lakh & for other categories family annual income should be less than or equal to 1 lakh)

ii. **Tribal Welfare Department:** Students from Scheduled Tribes with a family annual income should be less than or equal to 2.5 lakh

iii. **Minority Welfare Department:** Students from minority categories CAT -1**,** 2B, 3A, 3B with a specific income limit, i.e., family annual income should be less than or equal to 2.5 lakhs.

3. **How can I apply for a hostel seat in SHP?**
**ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದಲ್ಲಿ ಹಾಸ್ಟಲ್ ಸೀಟಿಗಾಗಿ ಅರ್ಜಿ ಸಲ್ಲಿಸುವುದು ಹೇಗೆ?**

ಹಾಸ್ಟೆಲ್ ಸೀಟಿಗಾಗಿ ಅರ್ಜಿ ಸಲ್ಲಿಸಲು, ವಿದ್ಯಾರ್ಥಿಗಳು **ಅಧಿಕೃತ ವೆಬ್‌ಸೈಟ್** ಮೂಲಕ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು.

- **ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ** ಮತ್ತು **ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ** ನಡೆಸುವ ನಿಲಯಗಳಿಗೆ ಅರ್ಜಿ ಸಲ್ಲಿಸಲು ಈ ಲಿಂಕ್ ಬಳಸಿ:

👉 https://shp.karnataka.gov.in/

- **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ** ನಡೆಸುವ ನಿಲಯಗಳಿಗೆ ಅರ್ಜಿ ಸಲ್ಲಿಸಲು ಈ ಲಿಂಕ್ ಬಳಸಿ:

👉 https://shp.karnataka.gov.in/bcwd

You can apply for the **State Hostel Portal (SHP)** through the official website

a. To apply for the Tribal Welfare & Minority Department-run Hostels, use the Link: https://shp.karnataka.gov.in/
b. To apply for the Backward Classes Welfare Department-run Hostels, use the Link: https://shp.karnataka.gov.in/bcwd

4. ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದಲ್ಲಿ **ಹಾಸ್ಟಲ್** ಸೀಟಿಗೆ ಅರ್ಜಿ ಸಲ್ಲಿಸಲು ಬೇಕಾಗುವ ದಾಖಲೆಗಳು ಯಾವುವು?
**What are the documents I need to submit to apply for a hostel seat in the State Hostel Portal?**

SHP ಯಲ್ಲಿ ಅರ್ಜಿ ಸಲ್ಲಿಸಲು ವಿದ್ಯಾರ್ಥಿಗಳು ಕೆಳಗಿನ ದಾಖಲೆಗಳ ಗುರುತು ಸಂಖ್ಯೆಗಳು/ವಿವರಗಳು ಸಿದ್ಧವಾಗಿಟ್ಟುಕೊಳ್ಳಬೇಕು:

- ವಿದ್ಯಾರ್ಥಿ ಮತ್ತು ಪೋಷಕರ ಆಧಾರ್ ಸಂಖ್ಯೆ
- SSP ID – ವಿದ್ಯಾರ್ಥಿಯ ಆಧಾರ್ ಬಳಸಿ ರಚಿಸಲಾದ 11 ಅಂಕಿಯ ಸಂಖ್ಯೆ
- ಜಾತಿ/ಆದಾಯ ಪ್ರಮಾಣ ಪತ್ರದ RD ಸಂಖ್ಯೆ
- SATS ID – (ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಕಡ್ಡಾಯ)
- ವಿಶ್ವವಿದ್ಯಾಲಯ ನೋಂದಣಿ ಸಂಖ್ಯೆ – (ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ)
- ಆಧಾರ್‌ಗೆ ಲಿಂಕ್ ಆದ ಮೊಬೈಲ್ ಸಂಖ್ಯೆ (ಇದ್ದರೆ ಉತ್ತಮ)
- ಸರ್ಕಾರಿ ದಾಖಲೆಗಳಲ್ಲಿ ನಮೂದಿಸಿರುವ ವಾಸಸ್ಥಳದ ವಿಳಾಸ

You are advised to keep the below-mentioned document IDs ready with you for submission of the application in the State Hostel Portal.

i. Aadhaar numbers of Student & Parent/guardian.
ii. SSP Student ID (A unique 11-digit number created using the Student's Aadhaar)

iii. Caste/Income certificate RD numbers (issued by the Revenue Department in the name of the student).
iv. SATS ID **(**mandatory**)** to fetch the academic details of students studying in classes 1 to 10th - Prematric students.
v. University Registration Number (Non-mandatory) to fetch the academic details of students studying above 10th - Postmatric students**.**
vi. Aadhaar-linked mobile number is preferred.
vii. Residential Address as mentioned in the govt documents.

**5. ಪ್ರತೀ ವರ್ಷ ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದಲ್ಲಿ ನೋಂದಣಿ ಮಾಡಬೇಕಾಗುತ್ತದೆಯೇ?**

**Is it required to create an account or register every year in the State Hostel Portal?**

**ಇಲ್ಲ, ವಿದ್ಯಾರ್ಥಿಯು ಶಿಕ್ಷಣಾವಧಿಯಲ್ಲಿ ಒಮ್ಮೆ ಮಾತ್ರ ಖಾತೆ ಸೃಜಿಸಿಕೊಳ್ಳಬೇಕು. ವಿದ್ಯಾರ್ಥಿ ಮತ್ತು ಅವರ ಪೋಷಕರ ಆಧಾರ್ ವಿವರಗಳನ್ನು ನೀಡಿ ಖಾತೆ ತೆರೆದ ಬಳಿಕ 11 ಅಂಕಿಯ SSP ಸಂಖ್ಯೆಯನ್ನು ನೋಂದಾಯಿಸಿದ ಮೊಬೈಲ್ ಸಂಖ್ಯೆಗೆ ಕಳುಹಿಸಲಾಗುತ್ತದೆ.**

A student has to create an account only once throughout their educational career, providing an Aadhaar of the student & parents/guardians. A unique 11-digit SSP will be generated and sent to a registered mobile number after creating an account in the State Hostel Portal.

**6.** ನಾನು SC/ST/OBC ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದೇನೆ. ಎಲ್ಲಾ ಇಲಾಖೆಯ ನಿಲಯಗಳಿಗೆ ಅರ್ಜಿ ಸಲ್ಲಿಸಬಹುದೇ?

**I am a student belonging to the SC/ ST/ OBC or Minority Category. Can I apply for all the department-run hostels in SHP?**

ಹೌದು. ನೀವು SC/ST/OBC ಅಥವಾ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ್ದರೆ, ಎಲ್ಲಾ ಇಲಾಖೆಯ ನಿಲಯಗಳಿಗೆ ಅರ್ಜಿ ಸಲ್ಲಿಸಲು ಅವಕಾಶವಿದೆ.

- **ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ನಿಲಯಗಳಿಗೆ ಅರ್ಜಿ ಸಲ್ಲಿಸಲು** 👉 https://shp.karnataka.gov.in/bcwd
- **ಪರಿಶಿಷ್ಟ ಪಂಗಡ ಮತ್ತು ಅಲ್ಪಸಂಖ್ಯಾತರ ಇಲಾಖೆಯ ನಿಲಯಗಳಿಗೆ ಅರ್ಜಿ ಸಲ್ಲಿಸಲು** 👉 https://shp.karnataka.gov.in/

Yes, if you belong to the SC/ ST/ OBC or Minority Category, then you can apply for Backward Classes Welfare, Tribal Welfare & Minority Welfare Department-run hostels in SHP.

**i. To apply for the Backward Classes Welfare Department-run hostels:**
URL: https://shp.karnataka.gov.in/bcwd/

**ii. To apply for the Tribal & Minority Welfare Department-run hostels:**
URL: https://shp.karnataka.gov.in/

**7.** ನಾನು ಈಗಾಗಲೇ ವಿದ್ಯಾರ್ಥಿ ನಿಲಯದಲ್ಲಿ ವಾಸಿಸುತ್ತಿದ್ದೇನೆ. ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದಲ್ಲಿ ಪ್ರತಿ ವರ್ಷವೂ ಹಾಸ್ಟೆಲ್ ಸೀಟಿಗಾಗಿ ಅರ್ಜಿ ಸಲ್ಲಿಸಬೇಕೇ?

**I am already staying in the hostel, is it required to apply for a hostel seat every year in the State hostel Portal?**

ಇಲ್ಲ, ನೀವು ಅದೇ ಕೋರ್ಸ್‌ನಲ್ಲಿ ಮುಂದುವರೆದಿದ್ದರೆ, ಪ್ರತೀ ವರ್ಷ ಹೊಸ ಅರ್ಜಿ ಸಲ್ಲಿಸಬೇಕಿಲ್ಲ. ವಾರ್ಡನ್‌ರನ್ನು ಸಂಪರ್ಕಿಸುವ ಮೂಲಕ ಪ್ರವೇಶವನ್ನು ನವೀಕರಿಸಿ ನಿಲಯ ಸೌಲಭ್ಯವನ್ನು ಮುಂದುವರಿಸಬಹುದು.

ಆದರೆ, ನೀವು ಅಂತಿಮ ವರ್ಷದ ನಂತರ ಹೊಸ ಕೋರ್ಸ್ ಸೇರಬೇಕಾದರೆ, ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕು.

a. No, if a student is studying in the same course, then the student need not apply for a **hostel seat every year** through the **State Hostel Portal (SHP)** in Karnataka. Hostel admissions are **automatically renewed** by approaching the hostel warden to continue availing hostel facilities for the next year.
b. If a student is studying in the final year of a particular course and needs to change the course for the subsequent year, then it is advised to apply as a fresher in the State Hostel Portal.

**8.** ನಾನು ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದಲ್ಲಿ ಖಾತೆಯನ್ನು ರಚಿಸಲು ಏಕೆ ಸಾಧ್ಯವಾಗುತ್ತಿಲ್ಲ?

**Why am I not able to create an account in SHP?**

ನಮೂದಿಸಿದ ವಿದ್ಯಾರ್ಥಿಯ ಆಧಾರ್ ಸಂಖ್ಯೆಯನ್ನು ಈಗಾಗಲೇ ಖಾತೆಯನ್ನು ಸೃಜಿಸಲು ಬಳಸಿದ್ದರೆ ಅಥವಾ ನಮೂದಿಸಿದ ಆಧಾರ್ ವಿವರಗಳು ತಪ್ಪಾಗಿದ್ದರೆ ವಿದ್ಯಾರ್ಥಿಗಳು ಖಾತೆಯನ್ನು ಸೃಜಿಸಲು ಸಾಧ್ಯವಾಗುವುದಿಲ್ಲ.

Students will not be able to create an account if the entered student's Aadhaar number is already used to create an account or the entered Aadhaar details are incorrect.

**9.** ಕರ್ನಾಟಕದ ಹೊರಗೆ ಇರುವ ಶಾಲೆ/ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿಗಳು ವಿದ್ಯಾರ್ಥಿ ನಿಲಯಕ್ಕೆ ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆಯೇ?

**Will a student be eligible for hostel accommodation if he/she is studying in a school/college located outside Karnataka?**

ಇಲ್ಲ, ಕರ್ನಾಟಕ ರಾಜ್ಯದೊಳಗಿನ ಶಾಲೆ/ಕಾಲೇಜುಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿ ನಿಲಯ (ಹಾಸ್ಟೆಲ್) ವಸತಿ ಸೌಲಭ್ಯ ಲಭ್ಯವಿರುತ್ತದೆ.

No, the hostel accommodation will be given to students who are studying in Karnataka only.

**10.** ನಾನು ಕರ್ನಾಟಕದಲ್ಲಿ ನೆಲೆಸಿಲ್ಲ; ನಾನು SHP ಯಲ್ಲಿ ಹಾಸ್ಟೆಲ್ ಸೀಟಿಗಾಗಿ ಅರ್ಜಿ ಸಲ್ಲಿಸಬಹುದೇ?

**I am not domiciled in Karnataka; can I apply for a hostel seat in SHP?**

ಇಲ್ಲ, ಕರ್ನಾಟಕ ರಾಜ್ಯದಲ್ಲಿ ನೆಲೆಸಿರುವ ವಿದ್ಯಾರ್ಥಿಗಳು ಮಾತ್ರ ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶದ(SHP) ಮೂಲಕ ಹಾಸ್ಟೆಲ್ ಸೀಟಿಗೆ ಅರ್ಜಿ ಸಲ್ಲಿಸಲು ಅರ್ಹರಾಗುತ್ತಾರೆ. ಕರ್ನಾಟಕದ ಹೊರಗಿನವರು ಅರ್ಜಿ ಸಲ್ಲಿಸಲು ಸಾಧ್ಯವಿಲ್ಲ.

No, if you are not a domicile of Karnataka, then you are not eligible to apply for a hostel seat in the State Hostel Portal.

**11. How can I know my SSP ID?**

ನನ್ನ SSP ಐಡಿಯನ್ನು ನಾನು ಹೇಗೆ ತಿಳಿದುಕೊಳ್ಳಬಹುದು?

ನಿಮ್ಮ SSP ಐಡಿಯನ್ನು ತಿಳಿದುಕೊಳ್ಳಲು, SSP ಅಧಿಕೃತ ವೆಬ್‌ಸೈಟ್ ಗೆ ಭೇಟಿ ನೀಡಿ: https://ssp.postmatric.karnataka.gov.in/2425_sa/Know_Student_Id.aspx, ಮತ್ತು SHP ಅಧಿಕೃತ ವೆಬ್‌ಸೈಟ್ URL: https://ssp.karnataka.gov.in:8080/2324/Check_ssp_id_New. "Know my SSP ID" ಆಯ್ಕೆಯ ಮೇಲೆ ಕ್ಲಿಕ್ ಮಾಡಿ, ಆಧಾರ್ ಸಂಖ್ಯೆ/SATS ಐಡಿಯನ್ನು ನಮೂದಿಸಿ ಮತ್ತು "Search" ಬಟನ್ ಮೇಲೆ ಕ್ಲಿಕ್ ಮಾಡಿ.

ಆಯ್ಕೆ 1: SSP ಅಧಿಕೃತ ವೆಬ್‌ಸೈಟ್ ಮೂಲಕ

- SSP ಅಧಿಕೃತ ವೆಬ್‌ಸೈಟ್‌ಗೆ ಭೇಟಿ ನೀಡಿ: https://ssp.postmatric.karnataka.gov.in/2425_sa/Know_Student_Id.aspx
- ನಿಮ್ಮ **ಆಧಾರ್ ಸಂಖ್ಯೆಯನ್ನು** ನಮೂದಿಸಿ.
- "**Search**" ಬಟನ್ ಮೇಲೆ ಕ್ಲಿಕ್ ಮಾಡಿದರೆ, ನಿಮ್ಮ **11 ಅಂಕಿಯ SSP IDಯನ್ನು** ಬಿತ್ತರಿಸಲಾಗುತ್ತದೆ.

ಆಯ್ಕೆ 2: SHP ಅಧಿಕೃತ ವೆಬ್‌ಸೈಟ್ ಮೂಲಕ

- SHP ಅಧಿಕೃತ ವೆಬ್‌ಸೈಟ್ URL ಬಳಸಿ: https://ssp.karnataka.gov.in:8080/2324/Check_ssp_id_New
- "**Know my SSP ID**" ಎಂಬ ಆಯ್ಕೆಯನ್ನು ಕ್ಲಿಕ್ ಮಾಡಿ.
- ನಿಮ್ಮ **SATS IDಯನ್ನು** ನಮೂದಿಸಿ.
- "**Search**" ಬಟನ್ ಮೇಲೆ ಕ್ಲಿಕ್ ಮಾಡಿದರೆ, ನಿಮ್ಮ **11 ಅಂಕಿಯ SSP IDಯನ್ನು** ಬಿತ್ತರಿಸಲಾಗುತ್ತದೆ.

To know your SSP ID, visit the SSP official website URL: https://ssp.postmatric.karnataka.gov.in/2425_sa/Know_Student_Id.aspx, & SHP official website URL: https://ssp.karnataka.gov.in:8080/2324/Check_ssp_id_New. Click on the "Know my SSP ID' option, enter the Aadhaar number/SATS ID, and click on the "Search" button.

**12.** ನನ್ನ ಜಾತಿ/ಆದಾಯ ಪ್ರಮಾಣಪತ್ರವನ್ನು ಪಡೆಯುವುದು ಹೇಗೆ?

**How to get my Caste / Income certificate?**

ನೀವು ಜಾತಿ/ಆದಾಯ ಪ್ರಮಾಣಪತ್ರವನ್ನು ಪಡೆಯಲು ಎರಡು ವಿಧಾನಗಳಿವೆ:

**ಆನ್‌ಲೈನ್ ಮೂಲಕ:**

- ನಾಡಕಚೇರಿ ಪೋರ್ಟಲ್‌ಗೆ ಭೇಟಿ ನೀಡಿ: https://nadakacheri.karnataka.gov.in/ajsk
- "Apply Online" ಆಯ್ಕೆ ಮಾಡಿ ಮತ್ತು ಅಗತ್ಯವಿರುವ ವಿವರಗಳನ್ನು ನಮೂದಿಸಿ.
- ಬೇಕಾದ ದಾಖಲೆಗಳನ್ನು ಅಪ್‌ಲೋಡ್ ಮಾಡಿ.
- ಅರ್ಜಿ ಸಲ್ಲಿಸಿದ ನಂತರ, ಪ್ರಮಾಣಪತ್ರವನ್ನು ಆನ್‌ಲೈನ್ ಮೂಲಕ ಪಡೆಯಬಹುದು.

**ಆಫ್‌ಲೈನ್ ಮೂಲಕ:**

- ನಿಮ್ಮ ಹತ್ತಿರದ **ನಾಡಕಚೇರಿ (AJSK) ಕೇಂದ್ರಕ್ಕೆ** ಭೇಟಿ ನೀಡಿ.
- ಅರ್ಜಿ ಫಾರ್ಮ್ ಅನ್ನು ಭರ್ತಿ ಮಾಡಿ ಹಾಗೂ ಅಗತ್ಯ ದಾಖಲೆಗಳನ್ನು ಸಲ್ಲಿಸಿ.
- ಪರಿಶೀಲನೆಯ ನಂತರ, ಪ್ರಮಾಣಪತ್ರವನ್ನು ಕಚೇರಿಯಿಂದ ಪಡೆಯಬಹುದು.

You can get the Caste/ Income certificate by applying in the Nadakacheri Portal URL:https://nadakacheri.karnataka.gov.in/ajsk or visit your nearest Nadakacheri (AJSK) center of the revenue department.

**13.** ಆದಾಯ ಪ್ರಮಾಣ ಪತ್ರದ ಅವಧಿ ಮುಗಿದಿದ್ದರೆ ಅದನ್ನು ನವೀಕರಿಸುವುದು ಹೇಗೆ?

**How to renew my Income certificate if expired?**

ಅರ್ಜಿ ಸಲ್ಲಿಸುವ ಸಮಯದಲ್ಲಿ ನಿಮ್ಮ ಆದಾಯ ಪ್ರಮಾಣಪತ್ರದ ಅವಧಿ ಮುಗಿದಿದ್ದರೆ, ಪ್ರಮಾಣಪತ್ರವನ್ನು ನವೀಕರಿಸಲು ನೀವು ನಾಡಕಚೇರಿ ಪೋರ್ಟಲ್ URL:https://nadakacheri.karnataka.gov.in/ajsk ಗೆ ಭೇಟಿ ನೀಡಲು ಸೂಚಿಸಲಾಗಿದೆ ಅಥವಾ ಕಂದಾಯ ಇಲಾಖೆಯ ನಿಮ್ಮ ಹತ್ತಿರದ ನಾಡಕಚೇರಿ (AJSK) ಕೇಂದ್ರಕ್ಕೆ ಭೇಟಿ ನೀಡಿ ನಿಮ್ಮ ಆದಾಯ ಪ್ರಮಾಣ ಪತ್ರವನ್ನು ನವೀಕರಿಸಿಕೊಳ್ಳಬಹುದು.

If your income certificate is expired at the time of application submission, you are advised to visit the Nadakacheri Portal URL:https://nadakacheri.karnataka.gov.in/ajsk to get the certificate renewed or visit your nearest Nadakacheri (AJSK) center of the revenue department.

**14.** ನಾನು ಮೊಬೈಲ್ ಫೋನ್ ಬಳಸಿ SHP ಯಲ್ಲಿ ಹಾಸ್ಟೆಲ್ ಸೀಟಿಗೆ ಅರ್ಜಿ ಸಲ್ಲಿಸಬಹುದೇ?

**Can I apply for a hostel seat in SHP using a mobile phone?**

ಹೌದು, ರಾಜ್ಯ ವಿದ್ಯಾರ್ಥಿ ನಿಲಯ ತಂತ್ರಾಂಶವು (SHP) ಮೊಬೈಲ್‌ಗೂ ಹೊಂದಿಕೊಳ್ಳುವಂತಿದೆ. ಆದ್ದರಿಂದ, ನೀವು ನಿಮ್ಮ ಮೊಬೈಲ್ ಫೋನ್ ಬಳಸಿ ಸುಲಭವಾಗಿ ಹಾಸ್ಟೆಲ್ ಸೀಟಿಗಾಗಿ ಅರ್ಜಿಯನ್ನು ಸಲ್ಲಿಸಬಹುದು

Yes, the State Hostel Portal is mobile-compatible, and hence, you can apply for hostel accommodation using a mobile phone.

**15.** ನನ್ನ ಪಾಸ್‌ವರ್ಡ್ ಅನ್ನು ಮರುಹೊಂದಿಸುವುದು ಹೇಗೆ?

**How to reset my password?**

ವಿದ್ಯಾರ್ಥಿ ಲಾಗಿನ್ ಪುಟದಲ್ಲಿ ಒದಗಿಸಲಾಗಿರುವ "ಪಾಸ್‌ವರ್ಡ್ ಮರೆತಿರುವಿರಾ?(Forgot Password)" ಆಯ್ಕೆಯನ್ನು ಬಳಸಿಕೊಂಡು ಪಾಸ್‌ವರ್ಡ್ ಮರುಹೊಂದಿಸಬಹುದು. ಅಲ್ಲದೆ, ಇಲಾಖಾ ತಾಲ್ಲೂಕು ಕಚೇರಿಯನ್ನು ಸಂಪರ್ಕಿಸುವ ಮೂಲಕ ಪಾಸ್‌ವರ್ಡ್ ಅನ್ನು ಮರುಹೊಂದಿಸಿಕೊಳ್ಳಬಹುದು.

Password reset can be done using the "Forgot Password" option provided on the student login page. Also, the password can be reset by approaching the departmental taluk offices.

**16.** ನನ್ನ ಮೊಬೈಲ್ ಸಂಖ್ಯೆಯನ್ನು ನವೀಕರಿಸುವುದು ಹೇಗೆ?

**How to update my mobile number?**

a. ನೀವು **ನೋಂದಾಯಿತ ಮೊಬೈಲ್ ಸಂಖ್ಯೆಯನ್ನು ಮರೆತಿದ್ದರೆ**, ಹತ್ತಿರದ **ಕಲ್ಯಾಣ ಇಲಾಖೆ ತಾಲ್ಲೂಕು ಕಚೇರಿಗೆ** ಭೇಟಿ ನೀಡಿ, ಅಸ್ತಿತ್ವದಲ್ಲಿರುವ ಮೊಬೈಲ್ ಸಂಖ್ಯೆಯನ್ನು ಬದಲಾಯಿಸಲು ವಿನಂತಿಸಬೇಕು.

b. ನೀವು **ಅಸ್ತಿತ್ವದಲ್ಲಿರುವ ಮೊಬೈಲ್ ಸಂಖ್ಯೆಯನ್ನು** ನೆನಪಿಟ್ಟಿದ್ದರೆ ಮತ್ತು ಅದನ್ನು ಬದಲಾಯಿಸಿ ಹೊಸ ಸಂಖ್ಯೆಯನ್ನು ಸೇರಿಸಲು ಬಯಸಿದರೆ, ಅದನ್ನು ನೇರವಾಗಿ **ವಿದ್ಯಾರ್ಥಿ ಲಾಗಿನ್ ಮೂಲಕ** ನವೀಕರಿಸಬಹುದು.

a. If you do not remember your registered mobile number, then you are advised to visit the nearest welfare department taluk office to get the existing mobile number changed.
b. If you remember the existing mobile number and need to update another number by removing the existing number, it can be updated from the student login.

**17.** ರಾಜ್ಯ ವಿದ್ಯಾರ್ಥಿ ತಂತ್ರಾಂಶದಲ್ಲಿ ಖಾತೆ ರಚನೆ ಅಥವಾ ಅರ್ಜಿ ಸಲ್ಲಿಕೆಯಲ್ಲಿ ಯಾವುದೇ ತಾಂತ್ರಿಕ ಸಮಸ್ಯೆಗಳು ಎದುರಾದರೆ ಯಾರನ್ನು ಸಂಪರ್ಕಿಸಬೇಕು?

**Whom to contact, if I face any technical issues with account creation or application submission in the State Hostel Portal?**

ಖಾತೆ ರಚನೆ ಅಥವಾ ಅರ್ಜಿ ಸಲ್ಲಿಕೆ ಪ್ರಕ್ರಿಯೆಗೆ ಸಂಬಂಧಿಸಿದ ಸಮಸ್ಯೆಯನ್ನು ದಾಖಲಿಸಲು ನೀವು "iPGRS ಸಹಾಯವಾಣಿ ಸಂಖ್ಯೆ – 1902" ಅನ್ನು ಸಂಪರ್ಕಿಸಬಹುದು.

You can contact the "iPGRS Helpline Number – 1902" to raise an issue regarding the account creation or application submission process.

**18.** . ಸಹಾಯಕ್ಕಾಗಿ ಯಾವುದೇ ಸಹಾಯವಾಣಿ ಕೇಂದ್ರ ಅಥವಾ ಸಹಾಯವಾಣಿ ಸಂಖ್ಯೆ ಲಭ್ಯವಿದೆಯೇ?

**Is there any helpline centre or helpline number available for assistance?**

ಹೌದು, ನಮ್ಮ ಸಹಾಯ ಕಾರ್ಯನಿರ್ವಹಣಾಧಿಕಾರಿಗಳು ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಪರಿಹರಿಸಲು ಸದಾ ಸಿದ್ಧರಾಗಿದ್ದಾರೆ. **"ಸಹಾಯವಾಣಿ ಸಂಖ್ಯೆ: 1902"** ಗೆ ಕರೆಮಾಡಬಹುದು.

Yes, our support executives will be pleased to assist and rectify the technical issues at the State Hostel Portal. "Helpline Number: 1902" or you can reach out to department helplines given in the portal.

**19.** ಅಂತಿಮ ಸಲ್ಲಿಕೆಯ ನಂತರ ನಾನು ನನ್ನ ಅರ್ಜಿಯನ್ನು ತಿದ್ದುಪಡಿ ಮಾಡಬಹುದೇ?

**Can I edit my application after the final submission?**

ಹೌದು, ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ(SHP) ಅರ್ಜಿ ನಮೂನೆಯ ಡ್ಯಾಶ್‌ಬೋರ್ಡ್‌ನಲ್ಲಿ ಅರ್ಜಿಯನ್ನು ಹಿಂಪಡೆಯುವ (Withdrawal) ಆಯ್ಕೆಯನ್ನು ನೀಡಲಾಗಿದೆ. ಈ ಆಯ್ಕೆಯನ್ನು ಬಳಸಿಕೊಂಡು, ವಿದ್ಯಾರ್ಥಿಗಳು ಅರ್ಜಿ ಸಲ್ಲಿಕೆಯ ನಂತರ ನಮೂದಿಸಿರುವ ಮಾಹಿತಿಯಲ್ಲಿ ತಿದ್ದುಪಡಿ ಮಾಡಿಕೊಳ್ಳಬಹುದಾಗಿದೆ. ಅಗತ್ಯ ತಿದ್ದುಪಡಿ ಮಾಡಿದ ನಂತರ ಅರ್ಜಿಯನ್ನು ಮರುಸಲ್ಲಿಸುವುದು ಕಡ್ಡಾಯ. ಇಲ್ಲವಾದಲ್ಲಿ, ಸಂಬಂಧಿತ ಅರ್ಜಿಯನ್ನು ಮುಂದಿನ ಹಾಸ್ಟಲ್ ಸೀಟು ಹಂಚಿಕೆ ಪ್ರಕ್ರಿಯೆಯಲ್ಲಿ ಪರಿಗಣಿಸಲಾಗುವುದಿಲ್ಲ.

Yes, the withdrawal option is given in the SHP application form dashboard. Using this option, students can edit the entered details after the application submission. It is advised to resubmit the application after making the necessary changes in the application form, or else the application will not be considered for further hostel allotment process.

**20.** ಹಾಸ್ಟೆಲ್ ಅರ್ಜಿಯನ್ನು ಆನ್‌ಲೈನ್‌ನಲ್ಲಿ ಸಲ್ಲಿಸಿದ ನಂತರ, ನಾನು ಯಾವುದೇ ಕಚೇರಿಗೆ ಭೌತಿಕ ದಾಖಲೆಗಳು ಅಥವಾ ಸ್ವೀಕೃತಿ ಪ್ರತಿಯನ್ನು ಸಲ್ಲಿಸಬೇಕೇ?

**After the online submission of the hostel application, do I have to submit the physical documents or acknowledgment copy to any office?**

ಇಲ್ಲ, ಆನ್‌ಲೈನ್ ಅರ್ಜಿ ಸಲ್ಲಿಕೆ ಪೂರ್ಣಗೊಂಡ ನಂತರ ವಿದ್ಯಾರ್ಥಿಗಳು ಯಾವುದೇ ರೀತಿಯ ಭೌತಿಕ ದಾಖಲೆಗಳು/ಸ್ವೀಕೃತಿಯನ್ನು ಯಾವುದೇ ಕಚೇರಿಗೆ ಸಲ್ಲಿಸಬೇಕಾಗಿಲ್ಲ.

No, students need not submit any kind of physical documents/acknowledgment to any office after the completion of the online application submission.

**21.** ನನ್ನ ಅರ್ಜಿಯನ್ನು ಯಾರು ಪರಿಶೀಲಿಸಿ ಹಾಸ್ಟೆಲ್ ಸೀಟು ಹಂಚಿಕೆ ಮಾಡುತ್ತಾರೆ?

**Who will verify/allot my hostel seat?**

ಆಯಾ ಇಲಾಖೆ ನಿಗದಿಪಡಿಸಿದ ಅರ್ಹತಾ ಮಾನದಂಡಗಳ ಪ್ರಕಾರ ಶ್ರೇಯಾಂಕ ಪಟ್ಟಿಯನ್ನು(Merit List) ರಚಿಸಲಾಗುತ್ತದೆ. ಹಾಸ್ಟಲ್ ಗಳಲ್ಲಿರುವ ಖಾಲಿ ಸ್ಥಾನಗಳ ಹಾಗೂ ಅರ್ಜಿ ನಮೂನೆಯನ್ನು ಸಲ್ಲಿಸುವಾಗ ವಿದ್ಯಾರ್ಥಿ ನೀಡಿದ ಹಾಸ್ಟೆಲ್ ಆದ್ಯತೆಯ ಆಧಾರದ ಮೇಲೆ ವಿದ್ಯಾರ್ಥಿಗಳಿಗೆ ಹಾಸ್ಟಲ್ ಸೀಟುಗಳ ಹಂಚಿಕೆ ಮಾಡಲಾಗುತ್ತದೆ.

As per the eligibility criteria set by the respective department merit list will be generated, and the seat matrix will be calculated, and the students will be allotted to the hostels based on the hostel priority given by the student while submitting the application form.

**22.** ಹಾಸ್ಟೆಲ್ ಸೀಟಿಗಾಗಿ ಸಲ್ಲಿಸಿದ ಅರ್ಜಿ ಸ್ಥಿತಿಯನ್ನು(ಸೀಟು ಹಂಚಿಕೆ/ಪ್ರವೇಶ) ನಾನು ಎಲ್ಲಿ ಪರಿಶೀಲಿಸಬಹುದು?

**Where can I check the Hostel (allotment/admission) application status?**

ಹಾಸ್ಟೆಲ್ ಸೀಟಿಗಾಗಿ ಸಲ್ಲಿಸಿದ ಅರ್ಜಿ ಸ್ಥಿತಿಯನ್ನು "SHP ಅರ್ಜಿ ಸ್ಥಿತಿ (SHP Application Status)" ಆಯ್ಕೆಯನ್ನು ಕ್ಲಿಕ್ ಮಾಡುವ ಮೂಲಕ ವಿದ್ಯಾರ್ಥಿಗಳು ತಮ್ಮ ಲಾಗಿನ್‌ನಲ್ಲಿ ತಮ್ಮ ಹಾಸ್ಟೆಲ್ ಅರ್ಜಿ ಸ್ಥಿತಿಯನ್ನು ಪರಿಶೀಲಿಸಬಹುದು.

Students can check their hostel application status in their login by clicking on the SHP APPLICATION STATUS option.

**23.** ಅರ್ಜಿ ಸಲ್ಲಿಸಿದ ನಂತರ ತಾಲ್ಲೂಕು/ಜಿಲ್ಲಾ ಕಚೇರಿಗೆ ಹೋಗಬೇಕೇ?

**After application submission, should I visit the taluk/ district office for further processing of the application?**

ಇಲ್ಲ, ಹಾಸ್ಟೆಲ್ ಸೀಟು ಪಡೆಯಲು ವಿದ್ಯಾರ್ಥಿಗಳು ತಾಲ್ಲೂಕು ಅಥವಾ ಜಿಲ್ಲಾ ಕಚೇರಿಗೆ ಭೇಟಿ ನೀಡುವ ಅಗತ್ಯವಿಲ್ಲ. SHP ಯಲ್ಲಿ ಸಲ್ಲಿಸಿದ ಅರ್ಜಿಯನ್ನು ಅರ್ಹತಾ ಮಾನದಂಡಗಳ ಆಧಾರದ ಮೇಲೆ ಆಯಾ ಇಲಾಖಾ ಅಧಿಕಾರಿಗಳು ಆನ್‌ಲೈನ್‌ನಲ್ಲಿ ಹಾಸ್ಟೆಲ್ ಸೀಟು ಹಂಚಿಕೆ ಮಾಡುತ್ತಾರೆ ಮತ್ತು ಹಾಸ್ಟೆಲ್ ಸೀಟು ಹಂಚಿಕೆ ಪ್ರಕ್ರಿಯೆಯ ಕುರಿತು SMS ಮೂಲಕ ವಿದ್ಯಾರ್ಥಿಗಳಿಗೆ ತಿಳಿಸಲಾಗುತ್ತದೆ.

Students need not visit the Taluk or the district office to get the hostel seat allotment. Application submitted in SHP will be processed, and a hostel seat will be allotted online by the respective department officers based on the eligibility criteria, and the same shall be informed to the students via text messages regarding the hostel seat allotment process.

**24.** ಹಾಸ್ಟೆಲ್ ಸೀಟು ಹಂಚಿಕೆಯ ನಂತರ, ಅರ್ಜಿಯ ಮುಂದಿನ ಪ್ರಕ್ರಿಯೆಗಾಗಿ ನಾನು ಹಾಸ್ಟೆಲ್ ವಾರ್ಡನ್ ಅವರನ್ನು ಭೇಟಿ ಮಾಡಬೇಕೇ?

**After hostel allotment, should I visit the hostel warden's office for further processing of the application?**

ಹೌದು, ನಿಗದಿಪಡಿಸಿದ ಹಾಸ್ಟೆಲ್‌ಗೆ ಪ್ರವೇಶ ಪಡೆಯಲು ನಿಗದಿತ ಸಮಯದೊಳಗೆ ಹಾಸ್ಟೆಲ್ ವಾರ್ಡನ್ ಅವರನ್ನು ಸಂಪರ್ಕಿಸಿ ಎಂದು ವಿದ್ಯಾರ್ಥಿಯ ಮೊಬೈಲ್ ಸಂಖ್ಯೆಗೆ SMS ಕಳುಹಿಸಲಾಗುತ್ತದೆ

Yes, a text message will be sent to the student's mobile number to contact the hostel warden within a stipulated time to get admission to an allotted hostel.

**25.** ಪ್ರವೇಶ ಪಡೆದ ವಿದ್ಯಾರ್ಥಿಗೆ ಒದಗಿಸಲಾದ ಹಾಸ್ಟೆಲ್ ಸೌಲಭ್ಯಗಳು ಯಾವುವು?

**What are the hostel facilities provided to a student who gets admitted?**

ಆಯಾ ಇಲಾಖೆಗಳು ನಡೆಸುವ ವಸತಿನಿಲಯಗಳಲ್ಲಿ ಒದಗಿಸುವ ಸೌಲಭ್ಯಗಳ ಬಗ್ಗೆ ತಿಳಿಯಲು ಇಲಾಖೆಗಳ ಅಧಿಕೃತ ವೆಬ್‌ಸೈಟ್‌ಗಳನ್ನು ಭೇಟಿ ಮಾಡಿ.

Refer to the departments' official websites to know about the facilities provided by the respective department-run hostels.
BCWD: https://bcw.karnataka.gov.in/76/post-matric-hostels/en

**26.** SHP ಯಲ್ಲಿ ಹಾಸ್ಟೆಲ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕ ಯಾವಾಗ?

**When is the last date for hostel application submission in SHP?**

ಹಾಸ್ಟೆಲ್ ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವು ಇಲಾಖೆಗಳನುಸಾರ ಬದಲಾಗುತ್ತದೆ. ಅರ್ಜಿ ಸಲ್ಲಿಕೆಗೆ ಕೊನೆಯ ದಿನಾಂಕವನ್ನು ತಿಳಿಯಲು ರಾಜ್ಯ ವಿದ್ಯಾರ್ಥಿನಿಲಯ ತಂತ್ರಾಂಶದ ಮುಖಪುಟವನ್ನು ಆಗಾಗ್ಗೆ ನೋಡುವಂತೆ ಸೂಚಿಸಲಾಗಿದೆ.

URL: https://shp.karnataka.gov.in/ (ಪರಿಶಿಷ್ಟ ಪಂಗಡಗಳ ಕಲ್ಯಾಣ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ)

URL: https://shp.karnataka.gov.in/bcwd/ (ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ)

The last date for hostel application submission varies for different departments. It is advised to refer to the State Hostel Homepage often to know the last date for application submission.
URL: https://shp.karnataka.gov.in/ (for Tribal & Minority Welfare Department)
URL: https://shp.karnataka.gov.in/bcwd/ (for Backward Classes Welfare Department)

**27.** "ನಾನು ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುವ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದೇನೆ. ನಾನು ಅದೇ ಇಲಾಖೆಯು ನಡೆಸುವ ಇನ್ನೊಂದು ಹಾಸ್ಟೆಲ್‌ಗೆ ವರ್ಗಾವಣೆಯನ್ನು ವಿನಂತಿಸಬಹುದೇ?"

**"I am currently staying in a hostel run by the Backward Classes Welfare Department. Can I request a transfer to another hostel run by the same department?"**

ಹೌದು, ನೀವು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುತ್ತಿರುವ ಮತ್ತೊಂದು ಹಾಸ್ಟೆಲ್‌ಗೆ ವರ್ಗಾವಣೆಯನ್ನು ವಿನಂತಿಸಬಹುದು. ಉತ್ತಮ ಸೌಲಭ್ಯಗಳು ಅಥವಾ ಶೈಕ್ಷಣಿಕ ಅನುಕೂಲತೆಗಳಂತಹ ಮಾನ್ಯ ಕಾರಣವಿದ್ದರೆ, ನೀವು ಹಾಸ್ಟೆಲ್ ವರ್ಗಾವಣೆಗೆ ವಿನಂತಿಸಬಹುದು.

Yes, you can request a transfer to another hostel run by the Backward Classes Welfare Department. If you have a specific reason for requesting a transfer, such as accessibility, facilities, or academic convenience, then it might strengthen your case when making a formal request.

**28.** ಅರ್ಜಿ ಸಲ್ಲಿಕೆಯ ಸಮಯದಲ್ಲಿ ನಾನು ತಪ್ಪು ಮಾಹಿತಿಯನ್ನು ಒದಗಿಸಿದರೆ ಏನಾಗುತ್ತದೆ?

**What happens to my applications if I provide false information during the submission?**

ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ವಿದ್ಯಾರ್ಥಿಯು ತಪ್ಪು ಮಾಹಿತಿಯನ್ನು ಒದಗಿಸಿದರೆ, ಸಂಬಂಧಿತ ಇಲಾಖೆಯು ಆ ಅರ್ಜಿಯನ್ನು ತಿರಸ್ಕರಿಸುತ್ತದೆ.

If a student applies by providing false information, the application may be rejected by the concerned department.

**29.** ನಾನು ಪ್ರಸ್ತುತ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ನಡೆಸುವ ಹಾಸ್ಟೆಲ್‌ನಲ್ಲಿ ವಾಸಿಸುತ್ತಿದ್ದೇನೆ. ಬೇರೆ ಇಲಾಖೆ ನಡೆಸುವ ಇನ್ನೊಂದು ಹಾಸ್ಟೆಲ್‌ಗೆ ವರ್ಗಾವಣೆಯನ್ನು ನಾನು ವಿನಂತಿಸಬಹುದೇ?

ಇಲ್ಲ, ನೀವು ಬೇರೆ ಇಲಾಖೆ ನಡೆಸುವ ಹಾಸ್ಟೆಲ್‌ಗೆ ವರ್ಗಾವಣೆಯನ್ನು ವಿನಂತಿಸಲು ಸಾಧ್ಯವಿಲ್ಲ. ಆದರೆ, ನೀವು ವಾಸಿಸುತ್ತಿರುವ ಅದೇ ಇಲಾಖೆಯ ಅಡಿಯಲ್ಲಿರುವ ಮತ್ತೊಂದು ಹಾಸ್ಟೆಲ್‌ಗೆ ಮಾತ್ರ ವರ್ಗಾವಣೆಯನ್ನು ವಿನಂತಿಸಬಹುದು.

**"I am currently staying in a hostel run by the Backward Classes Welfare Department. Can I request a transfer to another hostel run by another department?"**

No, you cannot request a transfer to a hostel run by another department. The transfer facility is available to another hostel within the department itself.

**30.** ವಸತಿನಿಲಯಗಳಲ್ಲಿ ಯಾವುದೇ ವಿಶೇಷ ವರ್ಗಗಳಿಗೆ ಮೀಸಲಾತಿ ಇದೆಯೇ?

**Are there any reservations for students in the hostels?**

ಹೌದು, ಪ್ರಮಾಣೀಕೃತ ಬಾಲ ಕಾರ್ಮಿಕರು, ದೈಹಿಕ ಅಂಗವೈಕಲ್ಯ ಹೊಂದಿರುವ ಮಕ್ಕಳು, ಅನಾಥ ಮಕ್ಕಳು, ಬುಡಕಟ್ಟು ಸಮುದಾಯಗಳಿಗೆ ಸೇರಿದ ಮಕ್ಕಳು, ಯೋಜನೆಯಿಂದ ಸ್ಥಳಾಂತರಗೊಂಡ ಪೋಷಕರ ಮಕ್ಕಳು, ಅನಾಥಾಶ್ರಮಗಳಲ್ಲಿ ದಾಖಲಾಗಿರುವ ಏಕಪೋಷಕರ ಮಕ್ಕಳು, ದೇವದಾಸಿಯರ ಮಕ್ಕಳು, ಮಾಜಿ ಸೈನಿಕನ ಮಕ್ಕಳು, ಆತ್ಮಹತ್ಯೆ ಮಾಡಿಕೊಂಡ ರೈತರ ಮಕ್ಕಳು, ಅಪಘಾತದಿಂದ ಸಾವನ್ನಪ್ಪಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಪೋಷಕರ ಮಕ್ಕಳು, ಹಿಂಸಾಚಾರದಲ್ಲಿ ಸಾವನ್ನಪ್ಪಿದ ಅಥವಾ ಶಾಶ್ವತವಾಗಿ ಅಂಗವಿಕಲರಾದ ಪೋಷಕರ ಮಕ್ಕಳು, ವಿಧವೆಯರ ಮಕ್ಕಳು ಮುಂತಾದ ವಿಶೇಷ ವರ್ಗಗಳ ವಿದ್ಯಾರ್ಥಿಗಳಿಗೆ ಮೀಸಲಾತಿ ಕಲ್ಪಿಸಲಾಗಿದೆ.

Yes, reservations are made for students with special categories such as Certified Child Labourers, Children with physical disability, Children who are orphans, Children belonging to Tribal Communities, Children of Scheme Displaced Parents, Children of Single Parents enrolled in girl/boys' orphanages, Ward of a Devadasi, Ward of ex-serviceman, Ward of a Farmer who committed suicide, Ward of a Parent who died or become permanently disable due to accident, Ward of a Parent who died or became permanently disabled in violence, Ward of a widow.

**31.** ಶೈಕ್ಷಣಿಕ ವರ್ಷದ ಕೊನೆಯಲ್ಲಿ ಹಾಸ್ಟೆಲ್ ಅನ್ನು ಖಾಲಿ ಮಾಡುವ ವಿಧಾನವೇನು?

**What is the procedure for vacating the hostel at the end of the academic year?**

ಹಾಸ್ಟೆಲ್ ಖಾಲಿ ಮಾಡುವ ನಿಮ್ಮ ಉದ್ದೇಶವನ್ನು ಲಿಖಿತವಾಗಿ ಹಾಸ್ಟೆಲ್ ಅಧಿಕಾರಿಗಳಿಗೆ ತಿಳಿಸಿ ಮತ್ತು ವಾರ್ಡನ್ ಲಾಗಿನ್ ಮೂಲಕ ಬಿಡುಗಡೆ ಪಡೆಯಿರಿ.

Inform the hostel authorities in writing about your intention to vacate and get relieved from the hostel warden login